ಹಣವನ್ನು ವಿತರಣೆ ಮಾಡಲು ಸೂಚಿಸಿದರೆ ಇಲ್ಲಿಯವರೆಗೆ ವಿತರಣೆ ಮಾಡಿಲ್ಲ ಏಕೆ? ಈ ಫಲಾನುಭವಿಗಳಿಗೆ ಸಾಲ ಮಂಜೂರಾಗಿ 2-3 ವರ್ಷಗಳಿಂದ ಅಲೆದಾಡಿಸಿದರೆ ಈ ಮಂಜೂರಾಗಿರುವ ಸಾಲದ ಅರ್ಧದಷ್ಟು ಪೊತ್ತ ತಿರುಗಾಡುವುದರಲ್ಲಿಯೇ ವೆಚ್ಚವಾದಂತಾಗಲಿಲ್ಲವೆ? ಖಾದಿ ಗ್ರಾಮೋದ್ಯೋಗ ಮಂಡಳಿ ಸಂಘ ಸೇಡಂ, ರವರಿಗೆ ಸುಸ್ತಿ ಬಾಕಿದಾರರಿಗೆ ದಾವೆ ಹೂಡಿ ಮಂಜೂರಾಗಿರುವ ಬಡ ಹರಿಜನರಿಗೆ ಸಾಲ ವಿತರಣೆ ಮಾಡಲು ಆದೇಶ ನೀಡಿದರೆ ಇಲ್ಲಿಯವರೆಗೆ ಒಂದೆರಡು ತಿಂಗಳಾದರೂ ಈ ಬಡ ಹರಿಜನರಿಗೆ ಸಾಲ ನೀಡಲಾರದ ಕಾರಣ ಈಗಲೂ ಸಹ ತಿರುಗಾಡುವುದು ತಪ್ಪಿಲ್ಲ. ಈ 40 ಫಲಾನುಭವಿಗಳಿಗೆ ಅತೀ ತೀವ್ರವಾಗಿ ಚರ್ಮೋದ್ಯೋಗದ ಸಾಲವನ್ನು ನೀಡಿ ಆಂಧ್ರದ ಗಡಿ ಪ್ರಾಂತ್ಯದಲ್ಲಿಯ ಬಡ ಹರಿಜನರ ಜೀವನೋಪಾಯಕ್ಕಾಗಿ ಮಂಜೂರಾಗಿರುವ ಸಾಲವನ್ನು ಕೊಡಲು ವ್ಯವಸ್ಥೆ ಮಾಡಿ ಅವರ ಜೀವನೋಪಾಯಕ್ಕೆ ಆಧಾರ ಮಾಡುವಿರೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

4) ಚನ್ನಪಟ್ಟಣ ತಾಲ್ಲೂಕು ಎಂ. ಕೆ. ದೊಡ್ಡಿಯ ಮತೀಯ ಗಲಭೆಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಪರಿಹಾರ.

SRI SADATH ALI KHAN (Channapatna) : Whether it is a fact that the Hon'ble Chief Minister of Karnataka has given assurance on the floor of the Assembly on the following matters:

a) The houses will be constructed to the families who lost their houses in fire accidents during the communal riots in the State ;
b) Whether it is a fact that 18 houses were burnt during the communal clashes at M. K. Doddi, Channapatna taluk ;
c) The houses have not been constructed so far to the 18 families in the above village ;
d) If so, the reason for inordinate delay to construct the houses to the above families which is pending since last three years ;
e) The action taken by the government to construct the houses to them, and
f) When it will be constructed , definite time limit may be given.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರಿಗೆ ಈ ವಿಚಾರ ತಿಳಿಸಿ, ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

5) ಹನೂರು ಕ್ಷೇತ್ರದ 7 ಗ್ರಾಮಗಳಿಗೆ ಕಿರು ನೀರು ಸರಬರಾಜು ಯೋಜನೆ.

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬಹಳ ಅಭಾವವಿದ್ದುದನ್ನು ಗಮನಿಸಿ, ಆ ಗ್ರಾಮಗಳಲ್ಲಿ ಕಿರು ನೀರು ಸರಬರಾಜು ಯೋಜನೆ ಮಾಡಲು, ಗಡಿ ಅಭಿವೃದ್ಧಿ ಯೋಜನೆಯ ಹಣದಿಂದ 7 ಗ್ರಾಮಗಳಿಗೆ, ಪ್ರತಿಯೊಂದು ಗ್ರಾಮಕ್ಕೆ 30,000 ರೂಪಾಯಿಗಳಂತೆ, 2 ಲಕ್ಷದ 10 ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಅಲ್ಲಿ ಒಂದೊಂದು ಕೊಳವೆ ಬಾವಿಯನ್ನು ಹಾಕಿಸಿರುತ್ತಾರೆ. ಮೈಸೂರು ಜಿಲ್ಲಾ ಪರಿಷತ್ತಿನವರು ಉಳಿದ ಹಣವನ್ನು ಕೊಡಿಸಬೇಕೆಂದು ಕೇಳಿಕೊಂಡಿದ್ದೆನು. ಸರ್ಕಾರ ನಮಗೆ ಬಹಳ ಹಣ ಬಿಡಗಡೆ ಮಾಡಬೇಕಾಗಿದೆ. ಈ ಕೆಲಸ ಆದನಂತರ ಹಣ ಕೊಡುವುದಾಗಿ 4 ತಿಂಗಳಿಂದಲೂ ಹೇಳುತ್ತಿದ್ದಾರೆ. ಆ ಗ್ರಾಮಗಳಲ್ಲಿ ನೀರಿನ ಬವಣೆ ಹೇಳತೀರದಾಗಿದೆ. ದಯವಿಟ್ಟು ಆ ಏಳು ಕಾಮಗಾರಿಕೆಗಳನ್ನು ಬೇಗನೆ ಮುಗಿಸುವಂತೆ, ಮೈಸೂರು ಜಿಲ್ಲಾಪರಿಷತ್‌ಗೆ ಆದೇಶ ನೀಡಬೇಕೆಂದು, ಪಂಚಾಯತ್‌ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ, ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಸದಸ್ಯರ ಹೇಳಿಕೆ .

Mr. Aziz sait as an hurdle for development of kannada.

SRI AZIZ SAIT(Narasimharaja) : Mr. Speaker Sir, it is very unfortunate that no less a person than my friend Mr.Vishwanath, Hon'ble Minister of State for Kannada and Culture has made a statement that, "hurdle to Kannada implementation, it is because of Aziz Sait it cannot be developed. He has digged the former minister Aziz Sait for claiming himself as torch bearer of the linguistic minorities." I do not know how I have been responsible for becoming hurdle to the growth of Kannada. Sir, I have been in the Legislative Council from 1960 to 1966 and in Assembly from 1967 onwards. Since 1961 I have been demanding that Kannada should be the compulsory language in minority institutions. In 1968 in the very House when Sri. K. V. Shankare Gowda was the Minister